**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 26.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ.ಪಿ ಎಂ ಸಿ ವಕೀಲರಿಂದಃ**

ಸದರಿ ಅಪಘಾತ ಎಲ್ಲಿ ಆಯಿತು ಎಂದರೆ Green Gate Bar Hubballi ಯಲ್ಲಿ ಆಗಿರುತ್ತದೆ ಎನ್ನುತ್ತಾರೆ. ಸದರಿ ಅಪಘಾತ ಬೆಳಿಗ್ಗೆ 10.45 ರ ಸಮಯಕ್ಕೆ ಆಗಿತ್ತು. ನಾನು ಆ ದಿವಸ ನನ್ನ ಮೋಟಾರ್ ಸೈಕಲ್ Active Honda ದಲ್ಲಿ ಹೋಗುತ್ತಿದ್ದೇನು. ಅದನ್ನು ನಾನೇ ಚಲಾಯಿಸುತ್ತಿದ್ದೇನು. ಸದರಿ ವಾಹನ ಚಲಾಯಿಸಲು ನನ್ನ ಬಳಿ ಚಾಲನಾ ಪರವಾನಿಗೆ ಇದೆ. ಅಪಘಾತವಾದ ದಿವಸ ನೀವು ಪೊಲೀಸ್ ಠಾಣೆಗೆ ಹೋಗಿ ಪಿರ್ಯಾದು ದಾಖಲಿಸಿದ್ದೀರಾ ಎಂದರೆ ಸಾಕ್ಷಿ ನಾನು ಆ ದಿನ ಆಸ್ಪತ್ರೆಗೆ ದಾಖಲಾಗಿದ್ದೇನು ಸದರಿ ದೂರನ್ನು ನನ್ನ ತಂದೆ ಕೊಟ್ಟಿರುತ್ತಾರೆ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದೂರನ್ನು ಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಸದರಿ Active Honda ವಾಹನ ಬಹಳ ವೇಗವಾಗಿ ಹೋಗುತ್ತಿದೆ ಎಂದರೆ ಸಾಕ್ಷಿ ಅದು ನಮ್ಮ ಕೈಯಲ್ಲಿಯೇ ಇರುತ್ತದೆ ಎನ್ನುತ್ತಾರೆ. ಅದು ಎಕ್ಸಿಲೆಟರ್ ಗಾಡಿ ಇರುವ ಕಾರಣ ಬಹಳ ವೇಗವಾಗಿ ಹೋಗುತ್ತದೆ ಎಂದರೆ ಸಾಕ್ಷಿ ಅದು ಹಾಗಲ್ಲ ಎನ್ನುತ್ತಾರೆ. ಸದರಿ ಅಪಘಾತ ನನ್ನ Active Honda ಮತ್ತು ಎದುರುಗಡೆಯವರ ಎಲೆಕ್ಟ್ರೀಕಲ್ ವಾಹನ ಆಗಿತ್ತು ಅದರ ಹೆಸರು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ವಾಹನದ ಸಂಖ್ಯೆ ನನಗೆ ಹೇಳಲು ಆಗುವುದಿಲ್ಲ ಆದರೆ ಅದು blue colour ಗಾಡಿಯಾಗಿತ್ತು ಎನ್ನುತ್ತಾರೆ. ಸದರಿ ಗಾಡಿ ಎಲೆಕ್ಟ್ರೀಕಲ್ ವಾಹನ ಆಗಿರುವ ಕಾರಣ ಅದಕ್ಕೆ ಆರ್ ಟಿ ಓ ದವರು ನೊಂದಣಿ ಮಾಡುವುದಿಲ್ಲ ಎಂದರೆ ಸಾಕ್ಷಿ ಮಾಡುತ್ತಾರೆ

ಎನ್ನುತ್ತಾರೆ. ನಾನು ಹಾಜರಪಡಿಸಿರುವ ದಾಖಲೆಗಳನ್ನು ನೋಡಿರುತ್ತೇನೆ. ನಾನು ಹಾಜರಪಡಿಸಿರುವ ದಾಖಲೆಗಳಲ್ಲಿ ಎಲೆಕ್ಟ್ರೀಕಲ್ ವಾಹನದ ಸಂಖ್ಯೆ ಇರುವುದಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ಆ ವಾಹನ ನೊಂದಣಿಯಾಗಿರಲಿಲ್ಲ ಹೊಸ ವಾಹನವಾಗಿತ್ತು ಆ ಕಾರಣಕ್ಕೆ ಅದರ ಸಂಖ್ಯೆ ಇರಲಿಲ್ಲ ಎನ್ನುತ್ತಾರೆ. ಸದರಿ ವಾಹನ ನೊಂದಣಿ ಮಾಡಲು ಬರುವುದಿಲ್ಲ ಹಾಗೂ ಅದು ಕೇವಲ 10 ರಿಂದ 15 ಕಿ ಮೀ ಮಾತ್ರ ಓಡಿಸುವ ಕಾರಣ ಅದನ್ನು ನೊಂದಣಿ ಮಾಡಿಸಿಲ್ಲ ಮಾಡಿಸುವ ಅವಶ್ಯಕತೆ ಕೂಡ ಇರುವುದಿಲ್ಲ ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ಸದರಿ ಅಪಘಾತ ನನ್ನ ತಪ್ಪಿನಿಂದ ಅಂದರೆ ನಾನು ನನ್ನ ಗಾಡಿಯನ್ನು ವೇಗವಾಗಿ ಓಡಿಸಿ ಸ್ಕಿಡ್ ಆಗಿ ಬಿದ್ದು ಅಪಘಾತಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ಎಲೆಕ್ಟ್ರೀಕಲ್ ವಾಹನದ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದು ಪೊಲೀಸರು ನನ್ನ ಮೇಲೆಯೇ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಾನು ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸಾಕ್ಷಿ ನನ್ನದು ಯಾವುದೇ ತಪ್ಪು ಇಲ್ಲ ಎನ್ನುತ್ತಾರೆ.

ಅಪಘಾತವಾದ ನಂತರ ನಾನು ಡಾಃಮೀರಜಕರ್ ರವರ ಬಳಿ ಚಿಕಿತ್ಸೆಗೆ ಹೋಗಿದ್ದೇನು. ಅಲ್ಲಿ ನಾನು ಸುಮಾರು 5 ರಿಂದ 6 ದಿವಸಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ. ಸದರಿ ಅಪಘಾತದಿಂದ ನನಗೆ ಸಣ್ಣಪುಟ್ಟ ಗಾಯಗಳು ಕೈಕಾಲುಗಳಿಗೆ ಆಗಿದ್ದವು ಮತ್ತು ನನ್ನ ಎಡಗಾಲಿಗೆ ಪೆಟ್ಟಾಗಿದ್ದು ಆಪರೇಶನ್ ಆಗಿದೆ ಅದಕ್ಕೆ ರಾಡ್ ಹಾಕಿದ್ದಾರೆ ಎನ್ನುತ್ತಾರೆ. ನನ್ನ ವೈದ್ಯಕೀಯ ಖರ್ಚಿಗೆ ನಾನು ಸುಮಾರು 3 ಲಕ್ಷ ರೂ.ಗಳನ್ನು ಖರ್ಚು ಮಾಡಿರುತ್ತೇನೆ. 3 ಲಕ್ಷ ರೂ.ಗಳಿಗೆ ಸಂಬಂಧಿಸಿದ ಬಿಲ್ ಗಳನ್ನು ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಕೆಲವೊಂದು ಮಿಸ್ ಆಗಿವೆ ಉಳಿದವುಗಳನ್ನು ಹಾಜರಪಡಿಸಿದ್ದೇನೆ ಎನ್ನುತ್ತಾರೆ. ನನ್ನ ಚಿಕಿತ್ಸೆಗೆ ಅಷ್ಟು

ಖರ್ಚು ಆಗಿರುವುದಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.12 ರಿಂದ 42 ದಾಖಲೆಗಳನ್ನು ನಾನು ಸೃಷ್ಟಿ ಮಾಡಿ ಹಾಜರಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ವಯಸ್ಸು ಈಗ 41 ವರ್ಷ ಇರುತ್ತದೆ. ಈಗ ನಾನು ಯಾವುದೇ ಕೆಲಸ ಮಾಡುವುದಿಲ್ಲ. ನನ್ನ ಮದುವೆಯಾಗಿರುವುದಿಲ್ಲ. ನನ್ನ ತಂದೆ ಮನೆಯಲ್ಲಿಯೇ ಇರುತ್ತಾರೆ. ಅವರಿಗೆ ಯಾವುದೇ ಆದಾಯ ಇರುವುದಿಲ್ಲ. ನನಗೆ ವಾಹನ ಚಾಲನೆ ಮಾಡಲು ಬರುತ್ತಿರಲಿಲ್ಲ ಆ ಕಾರಣಕ್ಕೆ ನಾನು ಗಾಡಿ ಚಲಾಯಿಸಿ ಸ್ಕಿಡ್ ಆಗಿ ಬಿದ್ದು ಅಪಘಾತಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಎದುರುದಾರ ನಂ.2 ನನಗೆ ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**